ಮಾಡಲು ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಡುವದಲ್ಲದೆ, ಕಂಟ್ರಾಕ್ಟರು ಕತರಾವಣೆಮಾಡಿ ಜಮಾಯಿಸಿರುವ ಬಿದರುಗಳನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲಾದೀತು. ಮತ್ತು ಇವನಿಂದ ಬರಬೇಕಾದ ಕಂಟ್ರಾಕ್ಟು ಹಣದ ಬಾಕಿಯನ್ನು ರೆವಿನ್ಯೂ ಕಂದಾಯದಂತೆ ಭಾವಿಸಿ ವಸೂಲ್ಮಾಡಲಾಧೀತು.

ಪಿಸ್ತುಗಳು.			ತಾರೀಖು.
I	..	..	1ನೇ ಮಾರ್ಚ್ 1897ನೇ ಇಸವಿ.
II	..	..	1ನೇ ಸಪ್ಟಂಬರ್ 1897ನೇ ಇಸವಿ.
III	..	..	5ನೇ ಜನವರಿ 1998ನೇ ಇಸವಿ.

4. ಹರಾಜು ಮುಂಜಾರ್ತಿಯಲ್ಲಿಟ್ಟ ಸಂಗತಿಯನ್ನು ಕಂಟ್ರಾಕ್ಟರಿಗೆ ತಿಳಿಯಪಡಿಸಿದ ಕೂಡ್ಲೆ ಇವನು ಮೇಲ್ಕಂಡ ಮತ್ತು ಈ ಕೆಳಗೆ ವಿವರಿಸಲ್ಪಟ್ಟ ಷರತ್ತುಗಳ ಕಂಡು ನಡದು ಕೊಳ್ಳತಕ್ಕ ಬಗ್ಗೆ ಛಾಪಾ ಕಾಗದದಲ್ಲಿ ಬಂದು ಮುಚ್ಚಳಿಕೆಯನ್ನು ಬರದು ಕೊಡತಕ್ಕದ್ದು.

5. ಹರಾಜು ಮಾಡಲ್ಪಡುವ ಪ್ರದೇಶದಲ್ಲಿ ಇರುವ ಒಣ ಬಿದರುಗಳನ್ನೆಲ್ಲಾ ಕಂಟ್ರಾಕ್ಟರು ಕತರಾವಣೆ ಮಾಡಿ ಅಥವಾ ಜೇರು ಸಹಿತ ಕಿತ್ತು ಸಾಗಿಸಿಕೊಂಡು ಹೋಗಬಹುದು, ಆದರೆ ಹಸೀ ಬಿದರುಗಳನ್ನು ಕಡಿಯುವವರಲ್ಲಿ ಪ್ರತಿ ಯೊಂದು ಪೊದೆಯಲ್ಲಿಯೂ ಎಂಟು ಹಸೀ ಬಿದರುಗಳನ್ನು ಬಿಟ್ಟಿ ಮಿಕ್ಕ ಪುಗಳನ್ನು ಸಾಧ್ಯವಾದ ಮಟ್ಟಿಗೂ ಭೂ ಮಟ್ಟಕ್ಕೆ ಸರಿಯಾಗಿ ಕಡಿಯತಕ್ಕದ್ದು.

6. ಫಾರೆಸ್ಟ್ ಇಲಾಖೆಯವರು ಮುಂಚಿತವಾಗಿ ಗುರ್ತು ಮಾಡಿಕೊಡುವ 100—200 ಎಕರೆ ವಿಸ್ತೀರ್ಣವುಳ್ಳ ಪ್ರತಿ ಯೊಂದು ಬ್ಲಾಕಿನಲ್ಲಿಯೂ ಒಂದು ಪ್ರದೇಶದಿಂದ ಪ್ರಾರಂಭಮಾಡಿ ಕ್ರಮವಾಗಿ ಕತರಾವಣೆಮಾಡಿಕೊಂಡು ಹೋಗಬೇಕೆ ಹೊರ್ತು ಯಾವ ಕಾರಣದಿಂದಲೇ ಯಾಗಲಿ ಜಂಗಲಿನ ಎಲ್ಲಾ ಪ್ರದೇಶದಲ್ಲಿಯೂ ಏಕಕಾಲದಲ್ಲಿ ಮನಸ್ಸೋ ಕತರಾವಣೆ ಮಾಡಕೂಡದು.

7. ಕತರಾವಣೆ ಮಾಡಿದ ಪ್ರದೇಶದಿಂದ ಬಿದರುಗಳನ್ನು ರಫ್ತು ಮಾಡುವದಕ್ಕೆ ಮೊದಲೆ ಪ್ರತಿಯೊಂದು ಗಾಡಿಗೂ ಫಾರೆಸ್ಟ್ ಇಲಾಖೆಯವರಿಂದ ಒಂದು ವೇ ಪರಮಿಟ್ ಪಡಿಯತಕ್ಕದ್ದು. ವೇ ಪರ್‌ಮಿಟ್ ಇಲ್ಲದ ಭರ್ತಿಗಾಡಿಗಳನ್ನು ಫಾರೆಸ್ಟ್, ಪೋಲೀಸ್ ಅಥವಾ ರೆವಿನ್ಯೂ ನವುಕರರು ತಡೆ ಮಾಡಬಹುದು.

8. ಕಂಟ್ರಾಕ್ಟರಿಗೆ ಇಷ್ಟವಿದ್ದಲ್ಲಿ ಪೂರ್ಣ ಬಿದರುಗಳಿಂದಲಾಗಲಿ ಅಥವಾ ಅವುಗಳ ಚೂರುಗಳಿಂದಲಾಗಲಿ ಮಳೆಗಾಲದಲ್ಲಿ ಇದ್ದಲು ಸುಡುವದಕ್ಕೆ ಅಪ್ಪಣೆ ಕೊಡಲಾಧೀತು.

9. ಪ್ರತಿಯೊಂದು ಬ್ಲಾಕಿನಲ್ಲಿಯೂ ಕತರಾವಣೆ ಮಾಡುವ ಬಿದರುಗಳನ್ನು ತಲೆಕೊಂಪೆ ಮತ್ತು ರಂಬೆಗಳನ್ನು ಸಹ ಮತ್ತೊಂದು ಬ್ಲಾಕು ಗುರ್ತು ಮಾಡಲ್ಪಡುವದಕ್ಕೆ ತತ್ಪೂರ್ವವೆ ಫಾರೆಸ್ಟ್ಯಿಂದ ಹೊರಗೆ ಸಾಗಿಸತಕ್ಕದ್ದು. ತಪ್ಪಿದರೆ ಬಿಡಲ್ಪಟ್ಟ ಬಾಬನ್ನು ಸರ್ಕಾರದ ಫಾಯಿದೆ ವೇಲೆ ನಿಗಾಯಿಟ್ಟು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಗೆ ಯುಕ್ತ ತೋರಿದ ರೀತಿಯಲ್ಲಿ ವಿಲೇವಾರಿ ಮಾಡಲು ಅವರು ಸ್ವತಂತ್ರರಾಗಿರುತ್ತಾರೆ.

ಬಿ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.

ತುಮಕೂರು ಡಿಸ್ಟ್ರಿಕ್ಟು.

ಫಾರೆಸ್ಟ್ ಡಿಪಾರ್ಟ್‌ಮೆಂಟ್.

ಸ್ ೧೮೯೬ನೇ ಇಸವಿ ನವೆಂಬರು ತಾರೀಖು 8ರಲ್ಲು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು, ಮದ್ದಗಿರಿ ಡಿಪೋಗಳಲ್ಲಿಯೂ, ಗುಬ್ಬಿ ತಾಲ್ಲೂಕು ಚನ್ನಶೆಟ್ಟಿಹಳ್ಳಿ ನಿಟಗುಂಟ ಪ್ಲಾಂಟೇಷ್ಟಗಳಲ್ಲಿಯೂ, ಕೆಳಗೆ ನಮೂದಿಸಿರತಕ್ಕ ತಾರೀಖು ಮತ್ತು ಸ್ಥಳಗಳಲ್ಲಿ ಸಾಮಾನುಗಳನ್ನು ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಹರಾಜ್ ಮಾಡಲ್ಪಡುತ್ತೆ.

ತುಮಕೂರು ಡಿಪೋ 11ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಲೆ.			ಮಣ.	ಸೇರು.
		ಅಡಿ.	ಅಂಗುಲ.	ಸೆಂಟ್ಸ್.		
ಜೇನುತುಪ್ಪ ..	..	..	..	..	51	27
ಜೇನು ಮೇಣ ..	..	..	..	..	7	..
ತ್ಯಾಗದ ತೀರುಗಳು ..	171	208	7	6	..	..
ಕ್ಯಾಸರೀನ ತೀರುಗಳು ..	983	1737	3	3	..	..

ಮದ್ದಗಿರಿ ಡಿಪೋ 15ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಲೆ.			ಮಣ.	ಸೇರು.
		ಅಡಿ.	ಅಂಗುಲ.	ಸೆಂಟ್ಸ್.		
ಜೇನುತುಪ್ಪ ..	..	..	..	..	29	1
ಜೇನು ಮೇಣ ..	..	..	..	..	4	21
ತ್ಯಾಗದ ತೀರುಗಳು ..	299	280	10	3	..	..

ಗುಬ್ಬಿ ತಾಲ್ಲೂಕು ಚಿಕ್ಕನಸಟ್ಟಹಳ್ಳಿ ನಿಟ್ಟಗುಂಟ ಪ್ಲಾಂಟೇಷ್ಯ, 21ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಲೆ.			ಪರಾ.
		ಅಡಿ.	ಅಂಗುಲ.	ಸೆಂಟ್ಸ್.	
ಕ್ಯಾಸರೀನ ತೀರುಗಳು ..	1841	..	..	..	ನಿಂತಿರುವ ವಣ ಮರಗಳು.

ಷರತ್ತುಗಳು.—ಹರಾಜು ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಜೊಂದಿರುತ್ತೆ.

ಹರಾಜು ಖೈದ.ದ ಕೂಡ್ಲೆ ಕಾಲು ಹಿಕ್ಕೆ ಮೊಬಲಗು ತೇವಣಿ ತರೀಕ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ಹರಾಜು ತಾರೀಖು ಲಾಗಾಯತು ಬಂದು ವಾರದ ಒಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೇ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ಮೊದಲು ಹರಾಜುದಾರನ್ನ ಗುರಿಮಾಡಲ್ಪಡುತ್ತೆ. ಸಾಮಾನುಗಳನ್ನೆಲ್ಲಾ ಹಣ ಪಾವತಿ ಮಾಡಿದ ತಾರೀಖು ಲಾಗಾಯತು 5 ದಿವಸಗಳೊಳಗಾಗಿ ಸಾಗಿಸಿಕೊಳ್ಳಬೇಕು ಪ್ಲಾಂಟೇಷ್ಯಗಳಲ್ಲಿ ವಣಗಿ ನಿಂತಿರುವ ಕ್ಯಾಸರೀನ ಮರಗಳು ಗುರ್ತು ಮಾಡಿ ನಂಬರು ಹಾಕಲ್ಪಟ್ಟಿರುತ್ತವೆ. ಖರೀದಿದಾರನು ಗುರ್ತು ಮಾಡಿರುವ ವಣ ಮರಗಳನ್ನ ಮಾತ್ರವೇ ಕಡಿದು 1896ನೇ ಇಸವಿ ಡಿಸೆಂಬರ್ ಆಖೈರ್ ಒಳಗಾಗಿ ಸದರೀ ಮರಗಳನ್ನ ಪ್ಲಾಂಟೇಷ್ಯಗಳ ಹದ್ದು ಬಸ್ತು ಹೊರಭಾಗದಲ್ಲಿರುವ ಫೈರ್ಲೈನ್ ಪ್ರದೇಶಕ್ಕೆ ಸಾಗಿಸಬೇಕು. ತರುವಾಯು ಆ ಮರಗಳು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಅಜಮಾಯಿಷಿ ಆದ ನಂತರ ಅವಶ್ಯಕವಾದ ರಹದಾರಿ ನಿಶಿ 1897ನೇ ಇಸವಿ ಜನವರಿ 15ರ ಒಳಗಾಗಿ ಸಾಗಿಸಬೇಕು. ಖರೀದಿದಾರನಾಗಲಿ ಅಥವಾ ಅವನ ಕಡೆ ಜನಗಳಾಗಲಿ ಯಾವ ವಿಧವಾದ ಅಕ್ರಮ ನಡಸಿದ್ದೇ ಆದರೆ ಖರೀದಿಗೆ ಪಡದುಕೊಂಡಿರತಕ್ಕ ಮರಗಳನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ 1878ನೇ ಇಸವಿ ಮೈಸೂರ್ [redacted]ರೆಸ್ಟ್ ರೂಲ್ಸ್ 40ನೇ ಸೆಕ್ಷನ್ ಪ್ರಕಾರ ಕ್ರಿಮಿನಲ್ ಶಿಕ್ಷೆಗೆ ಖರೀದಿದಾರನ್ನ ಗುರಿಮಾಡಲ್ಪಡುತ್ತೆ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಮದ್ದಗಿರಿ ಸಬ್ ಡಿವಿಜನ್ ಮುನಸಿಫ್ ಕೋರ್ಟಿನಿಂದ.

ಸ್ಯ 1894—95ನೇ ಇಸವಿ ಸಿವಿಲ್ ಒರಿಜನಲ್ ನಂಬರ್ 418.

ಮುನಸೀಫ್ ಡಿ. ಯಂ. ನರಸಿಂಗರಾವ್ ಯಸ್ಕ್ವಯರ್, ಬಿ. ಎ. ಬಿ. ಎಲ್. ಯವರ ರೂಬರೂಬ್.

ವಾದಿಗಳು.	ಪ್ರತಿವಾದಿ.
ಶಿರಾ ಕಸಬಾದಲ್ಲಿರುವವರು 1ನೇ ಅಕ್ಕಬರ್‌ಸಾಬಿ. 2ನೇ ಇಮಾಮು ಸಾ ಹರ್ದಿಸಾಬಿ. 3ನೇ ಉಸುಮ್ಮಾನ್‌ಸಾಬಿ. 4ನೇ ಅಕ್ಕಬರ್‌ಖಾನ್. 5ನೇ ಹೈದರ್‌ಸಾಬಿ.	ಶಿರಾದಲ್ಲಿರುವ ರಾಜಾಅಹಮದ್ ಸಾಬಿ.

ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಸೆಕ್ಷನ್ ಮೇರೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ತುಮಕೂರು ಡಿಸ್ಟ್ರಿಕ್ಟು ಶಿರಾ ತಾಲ್ಲೂಕು ಶಿರಾ ಕಸಬಾದಲ್ಲಿರುವ ಮಂಗಳವಾರಪೇಟೆಯಲ್ಲಿ ಪೂರ್ವಕ್ಕೆ ಆದ್ಯಪ್ಪನ ಮನೆ, ಪಶ್ಚಿಮಕ್ಕೆ ಶೇತುವೆನೀರು ಹೋಗುವನಾಲ್ಕಾ, ಉತ್ತರಕ್ಕೆ ತಿರಗಾಡುವ ದಾರಿ, ದಕ್ಷಿಣಕ್ಕೆ ಹೈರೋಡ್ ಈ ಮಧ್ಯೆ ಇರುವ ನಿವೇಶನದಲ್ಲಿ ಮಹಂಮದಿ ಜಾತಿಜನಗಳು ಬಾರಾಯಿಮಾಮು ಪಂಜಾ ಕೂಡಿಸುವ ಆಪರ್‌ಖಾನ ಜಾಗಕ್ಕೆ ಸಂಬಂಧಪಟ್ಟದ್ದೆಂತಲೂ (b) ಇತರರು 1ನೇ ಪ್ರತಿವಾದಿಗೆ ಕ್ರಯ ಮಾಡಲು ಯಾವ ವಿಧವಾದ ಹಕ್ಕೂ ಇಲ್ಲವೆಂತಲೂ (c) ಪ್ರತಿವಾದಿಯು ಇತರ ಜನಗಳಿಂದ ಪಡದು ಇರುವ ಕ್ರಯಸಾಧನದಂತೆ ಹೊಂದಿರುವ ಡಿಕ್ರಿಯು ಮತ್ತು ಕ್ರಯಪತ್ರವು ಅಸಿದ್ಧವಾಗಿರತಕ್ಕದೆಂತಲೂ (d) ಈ ಪ್ರತಿವಾದಿಯಿಂದ ವಾದಿಗಳು ಪೂರ್ವದಂತೆ ದಾವಾ ನಿವೇಶನವನ್ನ ತಮ್ಮ